C.R.P.67
Form No.4 (Criminal)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

Spl.C. No.123/2022 ಪಿ.ಡಬ್ಲ್ಯೂ-1 ಸಿ.ಡಬ್ಲ್ಯೂ-4

ದಿನಾಂಕಃ- 29.09.2025 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಆರ್. ಬಾಬು |
| ತಂದೆಯ ಹೆಸರು | ಚಂದ್ರಶೇಖರ್ |
| ವಯಸ್ಸು | 64 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸ | ಕಾವೇರಿ ಬಡಾವಣೆ,<br>ಕುಶಾಲನಗರ ತಾಲ್ಲೂಕು,<br>ಕೊಡಗು |

ಮುಖ್ಯ ವಿಚಾರಣೆಃ- ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ-

1. ರಾಮದೇವ ರವರು J.J. Crusher ಗೆ ಮಾಲೀಕರು ಆಗಿದ್ದಾರೆ. ನಾನು ಕಳೆದ 20 ವರುಷಗಳಿಂದ ಸ್ಪೋಟಕ ವಸ್ತುಗಳ ಅಧಿಕೃತ ಮಾರಾಟಗಾರನಾಗಿರುತ್ತೇನೆ. ನನ್ನ ಹತ್ತಿರ ಪವನ್ ಬಿ.ಕೆ, ರಮೇಶ ಯಾದವ್, ಮಿಥುನ್ ನಾಯಕ್ (2 ರಿಂದ 4 ನೇ ಆರೋಪಿಗಳು) ಕೆಲಸ ಮಾಡುತ್ತಿದ್ದಾರೆ.

2. ನಾನು 01.01.2018 ರಿಂದ 04.04.2026 ರವರೆಗೆ 1 ನೇ ಆರೋಪಿ ರಾಮದೇವ ರವರ ಹತ್ತಿರ ಸ್ಪೋಟಕಗಳನ್ನು ಬಳಸಿ compressor ಕುಳಿ ಮಾಡಲು ಕಲ್ಲು ಬಂಡೆಗಳನ್ನು ಸ್ಪೋಟಿಸಿ ಹಿಟಾಚಿ ಮೂಲಕ ಸೋಲಿಂಗ್ ಮಾಡಿ ಕ್ರಶರ್ ಬಳಿಗೆ ಟಿಪ್ಪರುಗಳಲ್ಲಿ ಸಾಗಾಟ ಮಾಡುವ ಗುತ್ತಿಗೆ ಒಪ್ಪಂದ ಮಾಡಿಕೊಂಡಿದ್ದೇನೆ.

3. 2019 ರಲ್ಲಿ ರಾಮದೇವ ರವರು ಕ್ವಾರೆಗೆ ಸ್ಪೋಟಕ ಕಳುಹಿಸಿ ಸಿಡಿಸಿ ಕೊಡುವಂತೆ ಹೇಳಿದ್ದರಿಂದ ನಮ್ಮ ಕೆಲಸಗಾರರಾದ ಪವನ್ ಬಿ.ಕೆ, ರಮೇಶ

ಯಾದವ್, ಮಿಥುನ್ ನಾಯಕ್ ರವರುಗಳು ಸ್ಫೋಟಕಗಳನ್ನು ಸಾಗಿಸುವ ವಾಹನದಲ್ಲಿ ಕುಶಾಲನಗರದ ರಾಮದೇವ ರವರ ಕ್ವಾರೆ ಬಳಿಗೆ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಜಿಲಟಿನ್ ಕಡ್ಡಿಗಳು, ಅಮೋನಿಯಂ ನೈಟ್ರೇಟ್, electronic detonator ಗಳನ್ನು ಬೂಸ್ಟರ್ ಗಳನ್ನು ಕಳುಹಿಸಿದ್ದೆನು. ರಾಮದೇವ ರವರು ಕ್ವಾರೆಗೆ ಬರದೇ ನಮ್ಮ ಕೆಲಸಗಾರರಿಗೆ ಸ್ಫೋಟಕ ವಸ್ತುಗಳನ್ನು ಬಳಸಿ ಕಲ್ಲುಗಳನು ಸಿಡಿಸಲು ಹೇಳಿದ್ದರಿಂದ ನಮ್ಮ ಕೆಲಸಗಾರರು ಸ್ಫೋಟಕ ವಸ್ತುಗಳನ್ನು ಸಿಡಿಸಲು ಪ್ರಯತ್ನಿಸುತ್ತಿರುವಾಗ ಪೊಲೀಸರು ಬರುತ್ತಿರುವುದನ್ನು ನೋಡಿ ಓಡಿಹೋದರು ಎಂದು ನನಗೆ ತಿಳಿಯಿತು.

4. ನಾನು ಪೊಲೀಸರ ಸಮಕ್ಷಮ ಅದರಂತೆ ನನಗೆ ದಿಃ 26.09.2019 ರಂದು ಕ್ವಾರೆಗೆ ........................................ ನಾನು ಆರೋಪಿಗಳನ್ನು ನೋಡಿದ್ದು ಮತ್ತೇ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪರವಾನಗಿ ಕೊಡಲಾಯಿತು)

<u>ಪಾಟೀ ಸವಾಲುಃ- ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ-</u>

1. ನಾನು ದಿನಾಂಕಃ 05.03.2020 ರಂದು ನಿಪಿ-1 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ಬರೆದಿರುವಂತೆ ಪೊಲೀಸರ ಸಮಕ್ಷಮ ಅದರಂತೆ ನನಗೆ ದಿಃ 26.09.2019 ರಂದು ಕ್ವಾರೆಗೆ ........................................ ನಾನು ಆರೋಪಿಗಳನ್ನು ನೋಡಿದ್ದು ಮತ್ತೇ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

2. ನಾನು ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ– ಆರೋಪಿತರ ಪರವಾಗಿ ಶ್ರೀ. ಎಂ ವಿ ಆರ್ ವಕೀಲರಿಂದಃ–</u>

ಇಲ್ಲ ಎಂದು ಹೇಳಿದ್ದಾರೆ.

<u>ಮರು ವಿಚಾರಣೆಃ– ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ–</u>

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜಿ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.